

## ಕಾಂಕ್ರೀಟ್ ಕಾಡಿನ ನಾಡಲ್ಲಿ

## ಬೆಟ್ಟ, ಬಯಲಲ್ಲಿ ಉಸಿರು ನೀಡುವ ಹಸಿರು ಕಾಡು ಬೆಳೆಸಲು

# ಬಿಸಾಡಿ ಬೀಜದುಂಡೆ



**ಮಹಾದೇವಯ್ಯ ಕರದಳ್ಳಿ**
ಕ್ಷೇತ್ರೀಯ ಸಹ ಸಂಯೋಜಕರು
ಸ್ವದೇಶಿ ಜಾಗರಣ ಮಂಚ್

ನೂರಾರು ವರ್ಷಗಳಿಂದ ನೆರಳು, ಆಮ್ಲಜನಕ, ನೀರು ನೀಡುತ್ತಿರುವ ಗಿಡಮರಗಳನ್ನು ನಿರ್ದಯವಾಗಿ ನಾಗರಿಕ ಸೌಲಭ್ಯಕ್ಕಾಗಿ ಕೆಡುವುತ್ತಿದ್ದೇವೆ. ಗ್ರಾಮೀಣ ಪ್ರದೇಶದ ಸಮಸ್ಯೆಗಳಿಂದ ಮುಕ್ತಿ ಪಡೆಯಲು, ಉದ್ಯೋಗಕ್ಕಾಗಿ, ನಗರದ ತಳುಕಿಗೆ ಮರುಳಾಗಿ ಗ್ರಾಮೀಣರು ನಗರಗಳಿಗೆ ವಲಸೆ ಬರುತ್ತಿದ್ದಾರೆ. ಬೃಹತ್ ಬಹುಅಂತಸ್ತಿನ ಕಟ್ಟಡಗಳು ಆಕಾಶದೆತ್ತರಕ್ಕೆದ್ದು ನಿಲ್ಲುತ್ತಿವೆ. ಕಾಂಕ್ರೀಟ್ ಕಾಡುಗಳು ಸೃಷ್ಟಿಯಾಗುತ್ತಿವೆ. ನಗರಗಳು ವಿಸ್ತಾರವಾದಂತೆ ನಗರ ಪ್ರದೇಶದ ಸುತ್ತಲಿನ ಹಸಿರುಮರಗಳು ಮತ್ತು ಕಾಡುಗಳು ಕಣ್ಮರೆಯಾಗುತ್ತಿವೆ. ವಾತಾವರಣದಲ್ಲಿನ ಏರುಪೇರುಗಳಿಂದ ಮಳೆ ಬರುವ ಪ್ರದೇಶಗಳಲ್ಲಿ ಮಳೆ ಬರುತ್ತಿಲ್ಲ. ಜಾಲತಾಣಗಳಲ್ಲಿನ ನೀರು ಇಂಗುತ್ತಿದೆ. ಭೂಮಿ ಅಂತರ್ಜಲ ಆಳಕ್ಕಿಳಿಯುತ್ತಿದೆ. ದಿನೇ ದಿನೇ ಉಷ್ಣತೆ ಏರುತ್ತಿದೆ. ಯುಗ ಯುಗ ಕಳೆದರೂ ಯುಗಾದಿ ಬರುವಂತೆ ವರ್ಷ ವರ್ಷ ಬರಗಾಲ ಬರುತ್ತಿದೆ. ಬವಣೆ ಹೆಚ್ಚುತ್ತಿದೆ. ಅಭಿವೃದ್ಧಿ ಸಾಧಿಸಲು ಊರಿಂದ ಊರಿಗೆ ಬೇಗ ತಲುಪಲು ಉತ್ತಮ ರಸ್ತೆ ಬೇಕು. ರಸ್ತೆ ನಿರ್ಮಾಣ ಅಥವಾ ಅಗಲ ಮಾಡಲು ಕಾಡು ಕಡಿಯಬೇಕು. ಉದ್ಯೋಗ ಉತ್ಪಾದನೆ ಹೆಚ್ಚಿಸಲು ಫ್ಯಾಕ್ಟರಿ ಹಾಕಬೇಕು, ಅದಕ್ಕಾಗಿ ಕಾಡು ಕಡಿಯಬೇಕು. ಹಾಳಾದ ಕಾಡಿನಷ್ಟೇ ಪ್ರಮಾಣ ಕಾಡು ನಿರ್ಮಿಸುವ ಚಿಂತನೆ ಕೊರತೆ ಇದೆ. ಕಾಡು, ಅರಣ್ಯ ಬೆಳೆಸಲು ಪ್ರತಿ ವರ್ಷ ಸರ್ಕಾರ ಕೋಟ್ಯಾಂತರ ರೂಪಾಯಿ ಖರ್ಚು